# ಧರ್ಮ ಪ್ರೇಮ

ಸಾಧನೆಯ ಹಾದಿಯಲ್ಲಿರುವವರು ಎಲ್ಲರನ್ನೂ ಮೆಚ್ಚಿಸಲು ಸಾಧ್ಯವಾಗುವುದಿಲ್ಲ. ಎಲ್ಲರನ್ನು ಮೆಚ್ಚಿಸಬೇಕು ಎಂಬ ಮಾತೇ ಪ್ರಶ್ನಿಸುವಂತದ್ದಾಗಿದೆ. ಮೆಚ್ಚಿಸಲು ಹೊರಟವೆಂದರೆ ನಿರೀಕ್ಷಿತ ಗುರಿ ತಲುಪಲಾಗುವುದಿಲ್ಲ.

ಗೌತಮ, ಪ್ರಭು, ಮಹಾತ್ಮ, ಭಗವಾನ್, ತಥಾಗತ, ಭೋಧಿಸತ್ವ ಹೀಗೆ ಹಲವು ಹೆಸರಿನಿಂದ ಕರೆಸಿಕೊಳ್ಳುವ ಗೌತಮಬುದ್ಧ ತನ್ನ ಮೇಲಿನ ಆಪಾದನೆಗಳನ್ನು ಕೇಳಬಲ್ಲವನಾಗಿದ್ದ ಮತ್ತು ರಾಗದ್ವೇಷಗಳಿಲ್ಲದೆ ಉತ್ತರಿಸಬಲ್ಲವನಾಗಿದ್ದ. ಶಿಷ್ಯರೊಂದಿಗೆ ತನ್ನ ಕುರಿತ ಆಪಾದನೆಗಳನ್ನೇ ಚರ್ಚೆಗೆ ಒಡ್ಡಬಲ್ಲವನಾಗಿದ್ದ. ಧರ್ಮದ ಆಚರಣೆಗಳನ್ನು ಪಾರದರ್ಶಕವಾಗಿ ಚರ್ಚಿಸುತ್ತಿದ್ದ ಅವನು ಸಾಮಾನ್ಯರಿಗೆ ಸಾಮಾನ್ಯನಾಗಿ ಎಟುಕಬಲ್ಲವನಾಗಿದ್ದ.

ಬುದ್ಧನ ವಿಚಾರ, ಜೀವನ ವಿಧಾನವನ್ನು ಟೀಕಿಸುವವರೂ ಇದ್ದರು. ಬುದ್ಧ ತನ್ನ ಮಾತಿನ ಥಳುಕಿನಿಂದ ಜನರನ್ನು ಮತಾಂತರ ಮಾಡುತ್ತಾನೆ ಎಂಬ ಆಪಾದನೆ ವ್ಯಕ್ತವಾಯಿತು. ಅದನ್ನು ತನ್ನ ಗಮನಕ್ಕೆ ತಂದ ಶಿಷ್ಯನಿಗೆ – 'ಧರ್ಮಗ್ರಂಥಗಳಲ್ಲಿದೆ, ತರ್ಕಸಮ್ಮತವಾಗಿದೆ, ಸಾಧುಸಂತರಿಗೆ ಗೌರವ ಕೊಡಬೇಕು ಎಂಬ ಕಾರಣಕ್ಕೆ ಯಾವುದನ್ನೂ ಒಪ್ಪಿಕೊಳ್ಳಬೇಡಿ. ಪ್ರತ್ಯಕ್ಷವಾಗಿ ಪ್ರಮಾಣಿಸಿ ಅದು ತಪ್ಪು ಎಂದೆನಿಸಿದಾಗ ಅವುಗಳನ್ನು ವರ್ಜಿಸಿ. ಮಹತ್ವಾಂಕಾಕ್ಷೆ ಉಳ್ಳವರು ತಮ್ಮ ಯಾವ ಉದ್ದೇಶ ಸಾಧಿಸಿಕೊಳ್ಳಲು ನನ್ನನ್ನು ನಿಂದಿಸುತ್ತಾರೋ ಅವರು ಅಸತ್ಯರು, ಶುದ್ಧ ಸುಳ್ಳು ಹೇಳುವವರೂ ಆಗಿದ್ದಾರೆ' ಎನ್ನುತ್ತಾನೆ ಬುದ್ಧ.

ಬುದ್ಧ ಮತ್ತು ಅವನ ಶಿಷ್ಯರು ದುಡಿಯದೆ ಉಣ್ಣುವವರೆಂಬ ಟೀಕೆಯೂ ಇತ್ತು. ಈ ರೀತಿ ಟೀಕಿಸಿದ ಒಬ್ಬ ಬ್ರಾಹ್ಮಣನಾದ ಒಕ್ಕಲಿಗನಿಗೆ ಬುದ್ಧ ಬೇಸಾಯದ ಪರಿಭಾಷೆಯಲ್ಲಿ ಉತ್ತರಿಸುತ್ತಾನೆ. 'ವಿಶ್ವಾಸವೇ ನನ್ನ ಬೀಜ. ಕಠಿಣ ಜೀವನ ವಿಧಾನವೇ ಮಳೆ. ವಿವೇಕವೇ ನೊಗ ಮತ್ತು ನೇಗಿಲು. ಪಾಪ ಕುರಿತಾದ ಭಯವೇ ನನ್ನ ಮೇಟಿ. ಯೋಚನೆಯೇ ನೊಗವನ್ನು ಕಟ್ಟುವ ಮಿಣಿ, ಲಕ್ಷ್ಯವೇ ನನ್ನ ಕುಳ ಮತ್ತು ಮೇಟಿ. ಮಾತು, ಕ್ರಿಯೆ, ಭುಂಜಿಸುವ ಆಹಾರದ ಮೇಲೆ ಹತೋಟಿಯನ್ನಿಟ್ಟುಕೊಂಡು ಪರಮಾನಂದವೆಂಬ ಬೆಳೆಯನ್ನು ಕೊಯ್ಲು ಮಾಡುತ್ತೇನೆ. ಉಳದ ಭೂಮಿಯನ್ನು ಉಳುತ್ತಾ ಅಮರತ್ವವೆಂಬ ಬೆಳೆಯನ್ನು ಬೆಳೆಯುತ್ತೇನೆ. ಇಂತಹ ವ್ಯವಸಾಯ ಎಲ್ಲ ದುಃಖ ದುಮ್ಮಾನಗಳಿಂದ ಮುಕ್ತಿ ಕೊಡುತ್ತದೆ' ಎಂಬ ಉತ್ತರ ಟೀಕಾಕಾರರ ಬಾಯಿ ಮುಚ್ಚಿಸುತ್ತದೆ.

ಬುದ್ಧನ ಸರಳ ಮೌಲ್ಯಗಳಿಗೆ, ಆಚರಣೆಗಳಿಗೆ ಮಾರುಹೋಗಿ ಶಿಷ್ಯರಾಗುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಯಿತು. ಯುವಕರಾದ ಶ್ರೀಮಂತರು, ಗಣ್ಯರು ಶಿಷ್ಯರ ಸಮೂಹ ಸೇರಿದರು. 'ಬುದ್ಧ ತಂದೆತಾಯಂದಿರಿಗೆ ಮಕ್ಕಳಿಲ್ಲದಂತೆ ಮಾಡುತ್ತಿದ್ದಾನೆ. ಗಂಡಂದಿರಿದ್ದೂ ಹೆಂಡತಿಯರು ವಿಧವೆಯರಾಗುತ್ತಿದ್ದಾರೆ. ಕುಟುಂಬ ವ್ಯವಸ್ಥೆ ಬುಡಮೇಲಾಗುತ್ತಿದೆ' ಎಂಬ ಆಪಾದನೆಗಳನ್ನು ಶಿಷ್ಯರು ಗೌತಮನಿಗೆ ತಲುಪಿಸುತ್ತಾರೆ. ಬುದ್ಧ ಈ ಗದ್ದಲ ಕೇವಲ ಏಳು ದಿನದವರೆಗೆ ಕೇಳಿ ಬರುತ್ತದೆ. 'ಈ ರೀತಿ ಆಪಾದಿಸಿದವರಿಗೆ ನನ್ನ ಧರ್ಮದಲ್ಲಿ ಬಲಪ್ರಯೋಗವಿಲ್ಲ, ಸದ್ಧರ್ಮದ ಮೂಲಕವೇ ಅವರನ್ನು ಕೊಂಡೊಯ್ಯಲಾಗುತ್ತದೆ. ಸ್ವ ಇಚ್ಛೆಯಿಂದ ಮನೆ ತ್ಯಜಿಸಬಹುದು ಮತ್ತು ಸ್ವ ಇಚ್ಛೆಯಿಂದಲೇ ಮನೆಗೆ ಅಂಟಿಕೊಳ್ಳಬಹುದು' ಎಂದು ಉತ್ತರಿಸುತ್ತಾನೆ. ಧರ್ಮದ ಮೂಲಕವೇ ಜನ ತನ್ನನ್ನು ಅನುಸರಿಸುವಂತೆ ಮಾಡುತ್ತಾನೆ.

ತಮ್ಮ ಪ್ರಯತ್ನಗಳೆಲ್ಲವೂ ವ್ಯರ್ಥವಾಗುವುದನ್ನು ಕಂಡವರು ಸಂಚು ಮಾಡಿ, ಸುಳ್ಳು ಆಪಾದನೆ–ಅಪಮಾನ ಮಾಡುವ ಪ್ರಯತ್ನ ಮಾಡಿದರು. ಸುಂದರಿಯೊಬ್ಬಳನ್ನು ಈ ಕೆಲಸಕ್ಕೆ ಆರಿಸಿಕೊಂಡರು. ಅವಳು ದಿನನಿತ್ಯ ಹೂಮಾಲೆ, ಸುಗಂಧದ್ರವ್ಯ, ಕರ್ಪೂರಗಳೊಡನೆ ಬುದ್ಧನಿರುವ ಚೇತವನಕ್ಕೆ ಹೋಗುತ್ತಿದ್ದಳು. ನಾನು ಗಂಧಕುಟೀರದಲ್ಲಿ ಬುದ್ಧನೊಡನೆ ಇರಲು ಹೋಗುತ್ತಿದ್ದೇನೆ ಎಂದು ಕೇಳಿದವರಿಗೆ ಹೇಳುತ್ತಿದ್ದಳು. ರಾತ್ರಿಯನ್ನು ಜೈನ ತೀರ್ಥಂಕರರ ಉಪವನದಲ್ಲಿ ಕಳೆಯುತ್ತಿದ್ದಳು. ರಾತ್ರಿಯನ್ನು ಎಲ್ಲಿ ಕಳೆದೆ ಎಂದು ಕೇಳಿದವರಿಗೆ 'ರಾತ್ರಿ ಗೌತಮನೊಂದಿಗೆ ಕಳೆದೆ' ಎನ್ನುತ್ತಿದ್ದಳು. ಈಕೆಯನ್ನು ಕೊಲೆಮಾಡಿಸಿ ಬುದ್ಧ ವಾಸಿಸುತ್ತಿದ್ದ ಗಂಧಕುಟೀರದ ಬಳಿ ದೇಹವನ್ನು ಹಾಕಿಸಲಾಗುತ್ತದೆ. ಬುದ್ಧನ ಶಿಷ್ಯರೇ ಈ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗುತ್ತದೆ. ಆದರೆ ಕೊಲೆ ಮಾಡಿದವರು ಅದಕ್ಕಾಗಿ ಪಡೆದ ಹಣವನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ ಸಿಕ್ಕಿಹಾಕಿಕೊಂಡು ಸತ್ಯ ಹೊರಬರುತ್ತದೆ.

ಈ ಬಾರಿಯ ಪ್ರಯತ್ನಕ್ಕೆ ಸುಂದರಿಯಾದ ಚಿಂಚಾ ಎಂಬ ಹೆಣ್ಣುಮಗಳನ್ನು ಬಳಸಿಕೊಳ್ಳುತ್ತಾರೆ. ಶ್ರಾವಸ್ತಿಯ ಚೇತವನದಲ್ಲಿ ಜನ ಅಲ್ಲಿನ ಪ್ರವಚನಗಳನ್ನು ಮುಗಿಸಿಕೊಂಡು ಹಿಂದಿರುಗಿ ಬರುವ ವೇಳೆಯಲ್ಲಿ ಅಲಂಕೃತ ಚಿಂಚಾ ಚೇತವನಕ್ಕೆ ಹೋಗುತ್ತಿದ್ದಳು. 'ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗುವೆ' ಎಂದು ಪ್ರಶ್ನಿಸಿದವರಿಗೆ, 'ಅದು ನಿಮಗೇಕೆ ಬೇಕು' ಎನ್ನುತ್ತಿದ್ದಳು. ಚೇತವನದ ಸಮೀಪದ ವನವೊಂದರಲ್ಲಿ ರಾತ್ರಿ ಕಳೆದು ಮರಳಿ ತನ್ನ ಜಾಗವನ್ನು ಸೇರುತ್ತಿದ್ದಳು. ಮತ್ತೆ ಪ್ರಶ್ನಿಸಿದವರಿಗೆ 'ನಾನು ರಾತ್ರಿಯನ್ನು ಗೌತಮನೊಡನೆ ಚೇತವನದ ಗಂಧಕುಟೀರದಲ್ಲಿ ಕಳೆದೆ' ಎನ್ನುತ್ತಿದ್ದಳು. ಒಂದುದಿನ ತನ್ನನ್ನು ಗರ್ಭಿಣಿ ಎಂದು ಘೋಷಿಸಿಕೊಂಡಳು. ಬುದ್ಧಪ್ರವಚನ ನೀಡುತ್ತಿದ್ದ ಸ್ಥಳಕ್ಕೆ ಬಂದು ನೇರವಾಗಿ 'ನಿಮ್ಮ ಸಂಗದಿಂದ ನಾನು ಗರ್ಭವತಿಯಾಗಿದ್ದೇನೆ. ಹೆರಿಗೆ ಸಮಯ ಹತ್ತಿರವಾಗುತ್ತಿದೆ. ಒಬ್ಬ ಹುಡುಗಿಯನ್ನು ಮರುಳುಮಾಡುವುದು ನಿಮಗೆ ತಿಳಿದಿದೆಯೇ ವಿನಃ ಅವಳ ಮಗುವಿಗೆ ಶುಶ್ರೂಷೆ ಮಾಡುವುದು ತಿಳಿದಿಲ್ಲ' ಎಂದು ಆಪಾದಿಸುತ್ತಾಳೆ. ಬುದ್ಧ 'ಈ ಸತ್ಯಾಸತ್ಯತೆ ನನಗೆ–ನಿನಗೆ ಮಾತ್ರ ತಿಳಿದಿದೆ' ಎಂದಷ್ಟೇ ಹೇಳುತ್ತಾನೆ. ಅಷ್ಟರಲ್ಲಿ ಆಕೆಗೆ ಕೆಮ್ಮು ಬಂದು ಹೊಟ್ಟೆಯ ಸುತ್ತ ಕಟ್ಟಿಕೊಂಡ ಬಟ್ಟೆಯ ತುಂಡುಗಳು ಜಾರಿಬಿದ್ದು ಅಪಮಾನಕ್ಕೆ ಈಡಾಗುತ್ತಾಳೆ.

ಮೊದಲಿನಿಂದಲೂ ವಿಶ್ವದಾದ್ಯಂತ ಧರ್ಮ, ರಾಜಕಾರಣಗಳೆಂಬ ಸಂಕೀರ್ಣ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳನ್ನು ಬಳಸಿಕೊಳ್ಳುವ ಕ್ರಮ ಹಾಸುಂಡು ಬೀಸಿ ಒಗೆದಾಂಗ ಎನ್ನುವಂತಿದೆ. ಸಮಾಜದ ವ್ಯವಸ್ಥೆಗೆ ಹಿಡಿದ ಕನ್ನಡಿಗಳಾಗಿ ಇಂತಹ ಘಟನೆಗಳನ್ನು ಉದಾಹರಣೆಯಾಗಿ ನಾವು ನೋಡಬೇಕಾಗುತ್ತದೆ.

ಹೀಗೆ ಗೌತಮಬುದ್ಧ ಹಾಗೂ ಬೌದ್ಧ ಧರ್ಮ ಪಾರದರ್ಶಕವಾಗಿದ್ದು ಸರಳ ವಿಧಿವಿಧಾನಗಳು, ಸಾರ್ವಜನಿಕವಾಗಿ ಚರ್ಚೆಗೆ ತೆರೆದುಕೊಳ್ಳುತ್ತಿದ್ದವು. ಶ್ರೇಷ್ಠ ಧರ್ಮವಾದ ಬೌದ್ಧಧರ್ಮ ಆಪಾದನೆ ಬಂದಾಗ ಸಂವಾದದ ಮೂಲಕ ತನ್ನನ್ನು ನಿರೂಪಿಸಿಕೊಂಡಿತು.

ಧರ್ಮವೆಂಬುದು ಜೀವಿಗಳನ್ನು ಪೊರೆಯಬೇಕೇ ವಿನಃ ಜೀವ ವಿರೋಧಿಯಾಗಬಾರದು ಎಂಬುದನ್ನು ಸರಳವಾಗಿ ಕಟ್ಟಿಕೊಟ್ಟಿತು.

■ **ಅಮೃತಮತಿ**

## ಮಾತೇ ಮುತ್ತು

- ನಾವಿರುವುದೇ ಪ್ರಯತ್ನಿಸಲು, ಸಾಹಸ ಮಾಡಲು, ಕಾಣಲು, ಸೋಲನ್ನೊಪ್ಪದೇ ಇರಲು.
  
  –ಲಾರ್ಡ್ ಟೆನಿಸನ್
- ನಿಮ್ಮ ಹಾದಿಯಲ್ಲಿ ಮುಳ್ಳು ಚೆಲ್ಲಿದವರ ಹಾದಿಯಲ್ಲಿ ಹೂ ಚೆಲ್ಲಿ.
  
  –ಸ್ವಾಮಿ ವಿವೇಕಾನಂದ
- ಸುಖ–ಸಂತೋಷದ ಮೂಲವೇ ಮನಸ್ಸು.
  
  –ಗೌತಮ ಬುದ್ಧ
- ಮಾತುಗಳು ಪರಸ್ಪರ ಬೇರ್ಪಡಿಸಲು ಇರುವುದಲ್ಲ, ಪರಸ್ಪರ ಸೇರಿಸಲು ಇರುವುದಾಗಿದೆ.
  
  –ಮಹಾತ್ಮ ಗಾಂಧೀಜಿ
- ನೀವೆಷ್ಟು ವರ್ಷ ಬದುಕುತ್ತೀರಿ ಎನ್ನುವುದು ಮುಖ್ಯವಲ್ಲ. ನೀವಿರುವ ವರ್ಷಗಳಲ್ಲಿ ಬದುಕು ಎಷ್ಟಿದೆ ಎನ್ನುವುದೇ ಮುಖ್ಯ.
  
  –ಅಬ್ರಹಾಂ ಲಿಂಕನ್
- ಧರ್ಮಾಚರಣೆ ಮಾಡದವನು ವಯಸ್ಸಾದಾಗ ಪಶ್ಚಾತ್ತಾಪದಿಂದ ಪರಿತಪಿಸುತ್ತಾನೆ.
  
  –ವಿದುರ ನೀತಿ
- ಹೆಸರಲ್ಲೇನಿದೆ? ಗುಲಾಬಿಯೆಂದು ಕರೆಯುವ ಹೂವನ್ನು ಯಾವ ಹೆಸರಿನಿಂದ ಕರೆದರೂ ಅದರ ಪರಿಮಳದಲ್ಲಿ ಯಾವ ವ್ಯತ್ಯಾಸವೂ ಇಲ್ಲ.
  
  –ಷೇಕ್ಸ್‌ಪಿಯರ್